ಶ್ರೀ ಇ.ಮಾರುತಿರಾವ್ ಪವಾರ್ (ನರಸಿಂಹರಾಜ): ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರದಲ್ಲಿ ಸ್ವಯಂ ಉದ್ಯೋಗ ಚಟುವಟಿಕೆ ಕೈಗೊಳ್ಳುವ ಸಲುವಾಗಿ ಮಹಿಳಾ ವಿದ್ಯಾರ್ಥಿಗಳಿಗೆ ಮಹಿಳಾ ಸರ್ಕಾರಿ ಐ.ಟಿ.ಐ. ಅವಶ್ಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದರೆ, 1998-99ನೇ ಸಾಲಿನಲ್ಲಿ ಮಹಿಳಾ ಸರ್ಕಾರಿ ಐ.ಟಿ.ಐ ಪ್ರಾರಂಭಿಸುವ ಬಗ್ಗೆ ಸರ್ಕಾರದವರು ಕೈಕೊಂಡಿರುವ ಕ್ರಮವೇನು?

ಶ್ರೀ ಬಿ.ಸತ್ಯನಾರಾಯಣ (ಕಾರ್ಮಿಕ ರಾಜ್ಯ ಸಚಿವರು):

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಉದ್ಯೋಗ ವಿನಿಮಯ ಕಛೇರಿಯ ಹುದ್ದೆಗಳ ನೇಮಕಾತಿ

2893:(3939)

ಶ್ರೀ ಇ.ಮಾರುತಿರಾವ್ ಪವಾರ್ (ನರಸಿಂಹರಾಜ): ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿರುವ ಉದ್ಯೋಗ ವಿನಿಮಯ ಕಛೇರಿಗಳ ಸಂಖ್ಯೆ ಎಷ್ಟು; ಈ ಕಛೇರಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ವರ್ಗದವರ ಸಂಖ್ಯೆ ಎಷ್ಟು; ಇವುಗಳ ಕಾರ್ಯ ನಿರ್ವಹಣೆಗೆ ತಗಲುವ ವೆಚ್ಚವೆಷ್ಟು?

ಆ) ಎಲ್ಲಾ ಇಲಾಖೆಗಳ ಹುದ್ದೆಗಳ ನೇಮಕಾತಿಯನ್ನು ಉದ್ಯೋಗ ವಿನಿಮಯ ಕಚೇರಿಯ ಮೂಲಕವೇ ಮಾಡಲಾಗುತ್ತಿದೆಯೇ?

ಇ) ಕೇಂದ್ರ ಸರ್ಕಾರ ಇತ್ತೀಚೆಗೆ ನೇಮಕಾತಿ ಮಾಡುವಲ್ಲಿ ಹೊರಡಿಸಿರುವ ಆದೇಶವೇನು. ಈ ಆದೇಶ ಪ್ರಕಾರ ರಾಜ್ಯಗಳ ಯಾವುದೇ ಇಲಾಖೆಯಲ್ಲಿ ಯಾವುದೇ ಹುದ್ದೆಗೆ ನೇಮಕಾತಿ ಮಾಡಬೇಕಾದಲ್ಲಿ ಉದ್ಯೋಗ ವಿನಿಮಯ ಜೇಷ್ಠತಾ ಪಟ್ಟಿ ಜೊತೆಗೆ ಬಹಿರಂಗವಾಗಿ ವೃತ್ತ ಪತ್ರಿಕೆಸುದ್ದಿ ಮಾಧ್ಯಮ ಪ್ರಕಟಣಾ ಫಲಕಗಳಲ್ಲಿ ಪ್ರಕಟಿಸುವುದೆಂಬುದು ನಿಜವೇ?

ಈ) ಜೇಷ್ಠತೆಯ ಅನ್ವಯ ಲಕ್ಷಾಂತರ ನಿರುದ್ಯೋಗಿ ನೊಂದಣಿದಾರರು ಉದ್ಯೋಗವಿಲ್ಲದೆ ಚಿಂತೆ ಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಉ) ಹಾಗಿದ್ದಲ್ಲಿ ಉದ್ಯೋಗ ವಿನಿಮಯ ಕಛೇರಿಗಳ ಪಾತ್ರವೇನು ಈ ವಿಷಯದ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮವೇನು?

ಶ್ರೀ ಬಿ.ಸತ್ಯನಾರಾಯಣ (ಕಾರ್ಮಿಕ ರಾಜ್ಯ ಸಚಿವರು):

ಅ) ಉದ್ಯೋಗ ವಿನಿಮಯ ಕಛೇರಿಗಳ ಸಂಖ್ಯೆ - 34

ಸಿಬ್ಬಂದಿ ಸಂಖ್ಯೆ - 480

1997-98ನೇ ಸಾಲಿನ ವೆಚ್ಚ ರೂ. 361.00 ಲಕ್ಷಗಳು

ಆ) ಇಲ್ಲ.

ಇ) ಕೇಂದ್ರ ಸರ್ಕಾರದ ಸಿಬ್ಬಂದಿ ಮತ್ತು ತರಬೇತಿ ಇಲಾಖೆಯ ಸಂಖ್ಯೆ : 14024:2:96 - ಇಎಸ್‌ಟಿಟಿ (ಡಿ) ದಿನಾಂಕ : 18.5.1998ರ ಅಧಿಕೃತ ಜ್ಞಾಪನದಲ್ಲಿ ನೀಡಲಾಗಿರುವ ಸೂಚನೆಯನ್ವಯ ಕೇಂದ್ರ ಸರ್ಕಾರವು ಖಾಲಿ ಹುದ್ದೆಗಳನ್ನು (ಕೇಂದ್ರ ಲೋಕಸೇವಾ ಆಯೋಗ ಹಾಗೂ ಸಿಬ್ಬಂದಿ ನೇಮಕಾತಿ ಆಯೋಗದ ಮೂಲಕ ಭರ್ತಿ ಮಾಡುವ ಹುದ್ದೆಗಳನ್ನು ಹೊರತುಪಡಿಸಿ) ಸಂಬಂಧಿಸಿದ ಉದ್ಯೋಗ ವಿನಿಮಯ ಕಛೇರಿಗಳಿಗೆ ಅಧಿಸೂಚಿಸುವುದರ ಜೊತೆಗೆ ''ಎಂಪ್ಲಾಯ್‌ಮೆಂಟ್ ನ್ಯೂಸ್'' ಪತ್ರಿಕೆಯಲ್ಲಿ ಪ್ರಕಟಪಡಿಸುವುದಲ್ಲದೆ ಆಯಾ ಕಛೇರಿಯ ಸೂಚನಾ ಫಲಕದಲ್ಲಿ ಸಹ ಮಾಹಿತಿಗಾಗಿ ಪ್ರಕಟಿಸಿ, ಇವುಗಳಿಗೆ ಪ್ರತಿಕ್ರಿಯಿಸಿ ಬಂದಂತಹ ಎಲ್ಲಾ ಅಭ್ಯರ್ಥಿಗಳ ಅರ್ಜಿಗಳನ್ನು ಪರಿಗಣಿಸಬೇಕಾಗಿರುತ್ತದೆ. ಈ ಸೂಚನೆ ರಾಜ್ಯ ಸರ್ಕಾರದ ಹುದ್ದೆಗಳಿಗೂ ಅನ್ವಯಿಸುತ್ತದೆ.

ಈ) ಬಂದಿದೆ.

ಉ) 1959ರ ಉದ್ಯೋಗ ವಿನಿಮಯ ಕೇಂದ್ರಗಳ (ಖಾಲಿ ಹುದ್ದೆಗಳ ಕಡ್ಡಾಯ ಅಧಿಸೂಚನೆ) ಅಧಿನಿಯಮದ ಅನ್ವಯ ಅಧಿಸೂಚಿತವಾಗುವ ಸರ್ಕಾರಿ ವಲಯದ ಹುದ್ದೆಗಳಿಗೆ ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳಿಂದ ಜಾರಿಯಲ್ಲಿರುವ ಕಾರ್ಯ ವಿಧಾನಗಳ ರೀತ್ಯ ಅರ್ಹತೆ ಹಾಗೂ ನೋಂದಣಿ ಜೇಷ್ಠತೆ ಆಧಾರ ಅರ್ಹ ಅಭ್ಯರ್ಥಿಗಳ ಪುರಸ್ಕರಣಾ ಕಾರ್ಯ ಎಂದಿನಂತೆ ಮುಂದುವರೆದಿದೆ.

ಅಧಿಸೂಚಿತ ಹುದ್ದೆಗಳ ಭರ್ತಿ ಕಾರ್ಯದಲ್ಲಿ ಉದ್ಯೋಗ ವಿನಿಮಯ ಕೇಂದ್ರಗಳ ಪಾತ್ರವೇನೂ ಇರುವುದಿಲ್ಲ.

ದಾವಣಗೆರೆ ನಗರದಲ್ಲಿ ಲೋಕಪಯೋಗಿ ಇಲಾಖೆಯ ವಿಭಾಗೀಯ ಕಛೇರಿ ಪಾರ್ರಂಭಿಸುವುದು

2894 (4017)

ಶ್ರೀ ಎಸ್.ಎಸ್.ಮಲ್ಲಿಕಾರ್ಜುನ (ದಾವಣಗೆರೆ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಾವಣಗೆರೆ ನಗರದಲ್ಲಿ ಲೋಕೋಪಯೋಗಿ ಇಲಾಖೆಯ ವಿಭಾಗೀಯ ಕಛೇರಿ ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದವರ ಪರಿಶೀಲನೆಯಲ್ಲಿದೆಯೇ?

ಆ) ಹಾಗಿದ್ದಲ್ಲಿ, ಅದನ್ನು ಯಾವಾಗ ಮಂಜೂರ್ಮಾಡಿ ಪ್ರಾರಂಭಿಸಲಾಗುವುದು?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು):

ಅ) ಹೌದು

ಆ) ಸದ್ಯದಲ್ಲಿಯೇ ಪ್ರಾರಂಭಿಸಲಾಗುವುದು.

ದಾವಣಗೆರೆ ಕ್ಷೇತ್ರಕ್ಕೆ ನಬಾರ್ಡ್ ಸಹಾಯದಿಂದ ಕೈಗೊಳ್ಳಲಾದ ಕಾಮಗಾರಿಗಳು.

2895:(4018)

ಶ್ರೀ ಎಸ್.ಎನ್.ಮಲ್ಲಿಕಾರ್ಜುನ (ದಾವಣಗೆರೆ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ನಬಾರ್ಡ್ ಸಹಾಯದಿಂದ ಕೈಗೊಳ್ಳಲಾದ ಕಾಮಗಾರಿಗಳಾವುವು?

ಆ) ಕಳೆದ ನಾಲ್ಕು ವರ್ಷಗಳಲ್ಲಿ ಕೈಗೊಂಡ ಕಾಮಗಾರಿಗಳು ಯಾವುವು? (ವಿಧಾನ ಸಭಾ ಕ್ಷೇತ್ರವಾರು ವಿವರ ನೀಡುವುದು)

ಇ) ದಾವಣಗೆರೆ ವಿಧಾನ ಸಭಾ ಕ್ಷೇತ್ರದಲ್ಲಿ ನಬಾರ್ಡ್ ನೆರವಿನಿಂದ ಕೈಗೊಂಡಿರುವ ಕಾಮಗಾರಿಗಳು ಯಾವುವು? ಹಾಗೂ ಸರ್ಕಾರದ ಮುಂದೆ ಇರುವ ಪ್ರಸ್ತಾವನೆಗಳು ಎಷ್ಟು? (ವಿವರ ನೀಡುವುದು)

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು):

ಅ) ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಡಿ ರಸ್ತೆ ಮತ್ತು ಸೇತುವೆ